## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಎನ್ .ರವಿ ಕುಮಾರ್ (ವಿಧಾನಸಭಾ ಕ್ಷೇತ್ರ) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 474 |
| 3 | ಉತ್ತರಿಸುವ ದಿನಾಂಕ | : | 11.12.2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಎಡಿಜಿಪಿ, ಕೆಎಸ್‌ಆರ್‌ಪಿ ಎಡಿಜಿಪಿ, ನೇಮಕಾತಿ ಮತ್ತು ಎಡಿಜಿಪಿ, ಆಡಳಿತ ಹಾಗೂ ಎಸಿಎಸ್ ಗೃಹ ಇಲಾಖೆಯವರನ್ನೊಳಗೊಂಡಂತೆ ದಿನಾಂಕ:22.03.2022 ರಂದು ಬಾಕಿ ಉಳಿದಿರುವ ಐಆರ್‌ಬಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಕುರಿತು ನಡೆದ ಉನ್ನತ ಮಟ್ಟದ ಸಭೆಯ ಸಭಾ ನಡವಳಿ ಸಂಖ್ಯೆ:ಒಇ 42 ಪಿಪಿಎಸ್ 2019 ದಿನಾಂಕ: 31.05.2022ರಂತೆ ದಿನಾಂಕ:28.09.2022 ರಂದು ಪತ್ರ ಸಂಖ್ಯೆ:50 ಹೆಚ್‌ಆರ್‌ಎಂ-2(1)/2022-23ರ ಮಧ್ಯಂತರ ವರದಿಯ ಅನ್ವಯ ಕೈಗೊಂಡ ಕ್ರಮಗಳೇನು; | 2012ನೇ ಸಾಲಿನ ಐಆರ್‌ಬಿ ಘಟಕಗಳ 750 ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ಲಭ್ಯವಿರುವ ಮಾಹಿತಿ/ದಾಖಲೆಗಳ ವಿವರ ಕೆಳಕಂಡಂತಿರುತ್ತದೆ:-<br>➢ ಸರ್ಕಾರದ ಅಧಿಸೂಚನೆ ಸಂಖ್ಯೆ:1 0/ನೇಮಕಾತಿ-4/ ಡಿಐಜಿಪಿ/2011-12 ದಿನಾಂಕ: 09.01.2012ರಲ್ಲಿ ಐಆರ್‌ಬಿ ಘಟಕಗಳ 750-ಸ್ಪೆ.ಆರ್‌ಪಿಸಿ ಹುದ್ದೆಗಳ ನೇಮಕಾತಿಗೆ ಅಧಿಸೂಚಿಸಲಾಗಿತ್ತು.<br>➢ ಪ್ರಥಮ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ 750 ಅಭ್ಯರ್ಥಿಗಳು, ಮೊದಲ ಹೆಚ್ಚುವರಿ ಪಟ್ಟಿಯಿಂದ 354 ಅಭ್ಯರ್ಥಿಗಳು ಮತ್ತು ಎರಡನೇ ಹೆಚ್ಚುವರಿ ಪಟ್ಟಿಯಿಂದ 134 ಅಭ್ಯರ್ಥಿಗಳು ಸೇರಿದಂತೆ ಒಟ್ಟು 1238 ಅಭ್ಯರ್ಥಿಗಳನ್ನು ದಾಖಲೆ ಪರಿಶೀಲನೆಗೆ ಕರೆಯಲಾಗಿದೆ.<br>➢ ಕೆಎಸ್‌ಆರ್‌ಪಿ ಕೇಂದ್ರ ಕಛೇರಿಯ ಪತ್ರ ಸಂಖ್ಯೆ:11/ಸಿಬ್ಬಂದಿ-2/2011-12 ದಿನಾಂಕ: 27.02.2013ರಲ್ಲಿ ಹೊರಡಿಸಲಾದ 750 ಅಭ್ಯರ್ಥಿಗಳ ಪ್ರಥಮ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ 611 ಅಭ್ಯರ್ಥಿಗಳನ್ನು ಮೊದಲ ಹೆಚ್ಚುವರಿ ಪಟ್ಟಿ 354 ರಲ್ಲಿ 138 ಅಭ್ಯರ್ಥಿಗಳು ಮತ್ತು ಎರಡನೇ ಹೆಚ್ಚುವರಿ ಪಟ್ಟಿ 134ರಲ್ಲಿ 1 ಅಭ್ಯರ್ಥಿಯು ಸೇರಿದಂತೆ ಒಟ್ಟು 750 ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಸಂಖ್ಯೆ:11/ಸಿಬ್ಬಂದಿ-2/2011-12 ದಿನಾಂಕ: 03.01.2014 ರಲ್ಲಿ ಹೊರಡಿಸಲಾಗಿದೆ.<br>➢ 750 ಅಭ್ಯರ್ಥಿಗಳ ಪ್ರಥಮ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ 139 ಅಭ್ಯರ್ಥಿಗಳನ್ನು, ಮೊದಲ ಹೆಚ್ಚುವರಿ ಪಟ್ಟಿಯ 354 ಅಭ್ಯರ್ಥಿಗಳಲ್ಲಿ 216 ಅಭ್ಯರ್ಥಿಗಳನ್ನು ಮತ್ತು ಎರಡನೇ ಹೆಚ್ಚುವರಿ ಪಟ್ಟಿಯ 134 ಅಭ್ಯರ್ಥಿಗಳಲ್ಲಿ 133 ಅಭ್ಯರ್ಥಿಗಳು ಸೇರಿದಂತೆ ಒಟ್ಟು 488 ಅಭ್ಯರ್ಥಿಗಳನ್ನು ಮುಖ್ಯವಾಗಿ ಸ್ವಂತ ಕೋರಿಕೆ, ವೈದ್ಯಕೀಯ ಪರೀಕ್ಷೆಯ |

| | | |
|---|---|---|
| | | ಅನರ್ಹತೆ, ಗೈರು ಹಾಜರಿ, ಜಾತಿ ಪ್ರಮಾಣ ಪತ್ರ ಅಮಾನ್ಯವಾದ, ಮೆರಿಟ್ ಆಧಾರದ ಮೇಲೆ ಮತ್ತು ಇನ್ನಿತರ ಕಾರಣಗಳಿಂದ ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿದೆ.<br>➢ ಐಆರ್‌ಬಿ 750-ಸ್ಪೆ.ಆರ್‌ಪಿಸಿ ಹುದ್ದೆಗಳಲ್ಲಿ ನೇಮಕಾತಿ ಆದೇಶ ಹೊರಡಿಸಿ ಬಾಕಿ ಉಳಿದ ರಿಕ್ತ ಹುದ್ದೆಗಳನ್ನು ತದನಂತರದಲ್ಲಿ ಕೈಗೊಳ್ಳಲಾದ ನೇಮಕಾತಿಗಳಲ್ಲಿ ಭರ್ತಿ ಮಾಡಲಾಗಿರುತ್ತದೆ.<br>➢ ದಿನಾಂಕ 22.03.2022ರಂದು ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶವನ್ನು ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಡಿಜಿ & ಐಜಿಪಿರವರಿಗೆ ಸೂಚಿಸಲಾಗಿದ್ದು, ಇವರಿಗೆ ನೇಮಕಾತಿ ಅದೇಶ ನೀಡುವ ಕುರಿತಂತೆ ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ. | ಸದನದಲ್ಲಿ ಐಆರ್‌ಬಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ ನ್ಯಾಯ ಒದಗಿಸುವುದಾಗಿ ಘೋಷಿಸಿ ಎರಡು ವರ್ಷವಾಗುತ್ತಿದ್ದು, ಇದುವರೆಗೂ ಈ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು? (ವಿವರ ನೀಡುವುದು) | ಪ್ರಸ್ತಾವನೆಯ ಬಗ್ಗೆ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳ ಅಭಿಪ್ರಾಯ ಕೋರಲಾಗಿದೆ. ಸದರಿ ಇಲಾಖೆಗಳ ಅಭಿಪ್ರಾಯದ ಆಧಾರದಲ್ಲಿ ಮುಂದಿನ ಕ್ರಮ ವಹಿಸಲಾಗುವುದು. |

**ಹೆಚ್‌ಡಿ 293 ಪಿಪಿಎಸ್ 2025**

**(ಡಾ|| ಜಿ. ಪರಮೇಶ್ವರ)**
ಗೃಹ ಸಚಿವರು